ವಾರದ ಪತ್ರ

## ಕಳ್ಳರಿಗೆ ಶಿಕ್ಷೆಯೇ ಇಲ್ಲ

ಕಲರ್ಸ್ ಕನ್ನಡದ 'ರಾಮಾಚಾರಿ'ಯಲ್ಲಿ ದೇವರ ಒಡವೆ ಕಳ್ಳತನ ಆಗುತ್ತೆ. ಆಗ ರಾಮಾಚಾರಿ ಒಂದು ಗಂಟೆಯಲ್ಲಿ ಕಳ್ಳನನ್ನು ಹುಡುಕುತ್ತೇನೆ ಎಂದು ಪೊಲೀಸರಿಗೆ ಹೇಳುತ್ತಾನೆ. ಒಡವೆ ಕದ್ದ ಮತ್ತು ಅವರಿಗೆ ಸಹಾಯ ಮಾಡಿದ ಎಲ್ಲ ಕಳ್ಳರು ಸಿಕ್ಕಿಬೀಳುತ್ತಾರೆ. ಆದರೆ, ಅವರಲ್ಲಿ ಯಾರೊಬ್ಬರಿಗೂ ಶಿಕ್ಷೆ ಆಗುವುದಿಲ್ಲ. ಪೊಲೀಸರು ಧಾರಾವಾಹಿಯಲ್ಲಿ ಯಾರನ್ನಾದರೂ ಬಂಧಿಸಿ ಎಂದರೆ ಬಂಧಿಸುತ್ತಾರೆ. ಬಿಟ್ಟುಬಿಡಿ ಅಂದ್ರೆ ಬಿಡುತ್ತಾರೆ. ಅಂದರೆ ಕಾನೂನನ್ನು ಕಥೆಯ ಚೌಕಟ್ಟಿನಲ್ಲಿ ಯಾವ ರೀತಿಯಲ್ಲಿ ಅರ್ಥೈಸುತ್ತಿದ್ದಾರೆ? ಕಾನೂನನ್ನು ಗೌರವಿಸುವಂತೆ ನಿರೂಪಿಸಬೇಕಲ್ಲವೆ?

—ಬಿ.ಆರ್. ಉಷಾ, ಬೆಂಗಳೂರು

## ಸುಪಾರಿ ಹಂತಕರ ಹಾವಳಿ

ಸಿನಿಮಾಗಳಲ್ಲಿ ಸಾಮಾನ್ಯವಾಗಿ ಕಾಣಿಸುತ್ತಿದ್ದ ಸುಪಾರಿ ಹಂತಕರು ಈಗ ಟೀವಿಯಲ್ಲೂ ಕಡ್ಡಾಯವಾಗಿದ್ದಾರೆ. ಬಹುತೇಕ ಧಾರಾವಾಹಿಗಳಲ್ಲಿ ಸುಪಾರಿ ಕೊಲೆಗಾರರು ಅನಿವಾರ್ಯ ಎನ್ನುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. 'ಅಗ್ನಿಸಾಕ್ಷಿ'ಯಲ್ಲಿ ಸದ್ದು ಮಾಡಿದ ಈ ಹಾವಳಿ 'ಮಂಗಳಗೌರಿ ಮದುವೆ'ಯಲ್ಲಿಯೂ ಕತ್ತಿ ಬೀಸಿತ್ತು. ಈಗ 'ಕನ್ನಡತಿ'ಯಲ್ಲೂ ಪ್ರವೇಶ ಪಡೆದಿದೆ. ಕನ್ನಡ ಧಾರಾವಾಹಿಯ ಯಶಸ್ವಿನ ಸಿದ್ಧಸೂತ್ರಗಳ ಸಾಲಿಗೆ ಸುಪಾರಿ ಕೊಲೆಗಾರರು ಸೇರಿದ್ದಾರೆ. 'ಕನ್ನಡತಿ'ಯನ್ನೂ ಈ ಸೂತ್ರ ಬಲಿ ತೆಗೆದುಕೊಂಡಿರುವುದು ನೋಡಿ ಶಾಕ್ ಆಗಿದೆ.

—ರಮಾನಂದ ಶರ್ಮಾ, ನವದೆಹಲಿ

## ಭೋಜನದ ನಡುವೆ ಮಿಮಿಕ್ರಿ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ಸಿಹಿಕಹಿ ಚಂದ್ರು ಮಾಡಿದ ಅಡುಗೆಯ ರುಚಿಯನ್ನು ಸವಿಯಲು ಬಂದ ಅತಿಥಿ ಜಯಂತ್ ಅವರು, ರಾಜ್‌ಕುಮಾರ್ ಹಾಗೂ ಶಿವರಾಜಕುಮಾರ್ ಅವರ ಮಿಮಿಕ್ರಿ ಮಾಡಿದ್ದು ಸೂಪರ್ ಆಗಿತ್ತು. 'ಮಯೂರ' ಸಿನಿಮಾದ ಡೈಲಾಗ್ ಹೊಡೆದಿದ್ದು ಬಹಳ ಖುಷಿ ಕೊಟ್ಟಿತು. ಚಂದ್ರು ಅವರ ದೋಸೆಯನ್ನು ತಿಂದು, ಅದರ ಸ್ವಾದವನ್ನು ಹುಚ್ಚ ವೆಂಕಟ್, ಧೀರೇಂದ್ರ ಗೋಪಾಲ್ ಶೈಲಿಯಲ್ಲಿ ಅಭಿನಯಿಸಿ ತೋರಿಸಿದ್ದು ರಂಜನೀಯವಾಗಿತ್ತು.

—ಕೆ.ಎಸ್. ಸವಿತ, ಬೆಂಗಳೂರು

## ವೀಕ್ಷಕ ಸರ್ವ ಸ್ವತಂತ್ರ

ಕೆಲವು ಟೀವಿ ಧಾರಾವಾಹಿಗಳನ್ನು ಚ್ಯೂಯಿಂಗ್‌ಗಮ್‌ನಂತೆ ಎಳೆದುಕೊಂಡು ಹೋಗುತ್ತಿದ್ದಾರೆ. ಅವುಗಳಿಗೆ ಮುಕ್ತಿಯೇ ಇಲ್ಲವೇನೋ? ಎಂದು 'ಸುಧಾ' ಓದುಗರು ತಮ್ಮ ಅನಿಸಿಕೆಯನ್ನು 'ಜಾಣರ ಪೆಟ್ಟಿಗೆ'ಯಲ್ಲಿ ಹೇಳುತ್ತಲೇ ಇದ್ದಾರೆ. ಧಾರಾವಾಹಿಗಳು ಪ್ರಾರಂಭದಲ್ಲಿ ಚೆನ್ನಾಗಿರುತ್ತವೆ. ಕ್ರಮೇಣ ಕಥೆಗೆ ಪೂರಕವಲ್ಲದ ಘಟನೆಗಳನ್ನು ಬೆಸೆಯುತ್ತಾರೆ. ಇದು ಹೂರಣವಿಲ್ಲದೆ ಸಪ್ಪೆ ಎನಿಸತೊಡಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಝೀ ಕನ್ನಡದ 'ಗಟ್ಟಿಮೇಳ'.

ಸುಮಾರು ಎರಡು ವರ್ಷಗಳಿಂದ 'ಗಟ್ಟಿಮೇಳ' ಪ್ರಸಾರವಾಗುತ್ತಿದೆ. ಈ ಧಾರಾವಾಹಿಯನ್ನು ಆರಂಭದಲ್ಲಿ ನೋಡುತ್ತಿದ್ದ ನಾನು, ಸ್ವಲ್ಪ ದಿನ ನೋಡುವುದನ್ನೇ ನಿಲ್ಲಿಸಿದ್ದೆ. ಇತ್ತೀಚೆಗೆ ಮತ್ತೆ ನೋಡುತ್ತಿದ್ದೇನೆ. ಒಂದು ವಾರದಿಂದ ಕಥೆಯ ತಿರುವು ಸ್ವಲ್ಪ ಬದಲಾಗಿದೆ. ಕೋರ್ಟ್ ದೃಶ್ಯದ ಮೂಲಕ ವೀಕ್ಷಕರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ ಅನಿಸಿತು. ಮಾತ್ರವಲ್ಲ, ಇದನ್ನು ನೋಡುತ್ತಿದ್ದ ಹಾಗೆ ಜನಪ್ರಿಯ ಧಾರಾವಾಹಿ 'ಮೂಡಲ ಮನೆ' ನೆನಪಾಗುತ್ತಿದೆ. ಏನೇ ಆದರೂ ಧಾರಾವಾಹಿ ನೋಡುವ ಸ್ವಾತಂತ್ರ್ಯ ವೀಕ್ಷಕರಿಗೇ ಮೀಸಲು ಅಲ್ಲವೇ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಗಿಚ್ಚಿ ಗಿಲಿಗಿಲಿ

ಕಲರ್ಸ್ ಕನ್ನಡದಲ್ಲಿ 'ಗಿಚ್ಚಿ ಗಿಲಿಗಿಲಿ' ವಾರಾಂತ್ಯದಲ್ಲಿ ಪ್ರಸಾರವಾಗುತ್ತಿದೆ. ಮಜಾ ಟಾಕೀಸಿನ ಸೃಜನ್ ಗರಡಿಯ ರಿಯಾಲಿಟಿ ಶೋ ಎಂದು ಟೀವಿ ಮುಂದೆ ಕುಳಿತರೆ ನಿರಾಸೆ ಕಟ್ಟಿಟ್ಟ ಬುತ್ತಿ! ಬೆರಳೆಣಿಕೆಯ ಹೊಸಬರನ್ನು ಬಿಟ್ಟರೆ ಅದೇ ಹಳೆಯ ಮುಖಗಳು, ಅದೇ ಮಾತು, ನಗೆಯೇ ಬಾರದ ಪ್ರಹಸನಗಳು, ಸುಖಾಸುಮ್ಮನೆ ಬಿದ್ದು ಬಿದ್ದು ನಗುವ ಸಹಸ್ಪರ್ಧಿಗಳು. ಮಹಿಳೆಯರು, ಮಕ್ಕಳು ವೀಕ್ಷಿಸುತ್ತಾರೆ ಎನ್ನುವ ಪರಿಜ್ಞಾನವಿಲ್ಲದೇ ಡಬಲ್ ಮೀನಿಂಗ್ ಸಂಭಾಷಣೆಗಳನ್ನು ಎಗ್ಗಿಲ್ಲದೇ ಉದುರಿಸುವ ತೀರ್ಪುಗಾರರು. ಇದನ್ನು ನೋಡುತ್ತಿದ್ದರೆ ನನಗೆ 'ಹೃದಯದಲಿ ಗಲಿಬಿಲಿ' ಆಗುತ್ತಿದೆ ಎಂದೆನಿಸುತ್ತದೆ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

## ಹಾಸ್ಯ ಧಾರಾವಾಹಿಗಳ ಕಣ್ಮರೆ

ಯಾವ ವಾಹಿನಿಯಲ್ಲಿ ನೋಡಿದರೂ ಗೋಳಿನ, ನೋವಿನ ಧಾರಾವಾಹಿಗಳು. 'ಸಿಲ್ಲಿ ಲಲ್ಲಿ', 'ಪಾಪ ಪಾಂಡು'ನಂತಹ ಹಾಸ್ಯ ಧಾರಾವಾಹಿಗಳು ಈಗಲೂ ಜನರ ಮನದಲ್ಲಿ ಹಸಿರಾಗಿವೆ. ಕಲರ್ಸ್ ಸೂಪರ್‌ನಲ್ಲಿ ಕೆಲವು ಹಾಸ್ಯ ಧಾರಾವಾಹಿ ಮರುಪ್ರಸಾರ ಆಗುತ್ತಿವೆ. ಅದನ್ನು ಬಿಟ್ಟರೆ ಯಾವುದೇ ಹೊಸ ಹಾಸ್ಯ ಸಂಚಿಕೆಗಳು ಮೂಡಿಬರುತ್ತಿಲ್ಲ. ಹಾಸ್ಯ ಇಷ್ಟಪಡುವ ಪ್ರೇಕ್ಷಕರನ್ನೂ ಗಮನದಲ್ಲಿಟ್ಟುಕೊಂಡು ಕೆಲವು ಧಾರಾವಾಹಿಗಳನ್ನು ಪ್ರಾರಂಭಿಸಬೇಕು ಎಂಬುದು ನನ್ನ ಅನಿಸಿಕೆ.

—ಕೃಪಾ ವಿ., ಕೆ.ಆರ್. ಪೇಟೆ

## ಕೂಡು ಕುಟುಂಬ ಚಂದ

ಯಾವುದೇ ಧಾರಾವಾಹಿ ನೋಡಿದರೂ ಅದರಲ್ಲಿ ಕುಟುಂಬಗಳನ್ನು ಬೆಸೆಯುವ ಬದಲು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಅತ್ತೆ–ಸೊಸೆಗೆ ಕಾಟ ಕೊಡುವುದು. ಅತ್ತೆ ಮನೆಯನ್ನು ಬಿಟ್ಟು ತನ್ನ ತಾಯಿಮನೆ ಸೇರುವ ಸೊಸೆ. ಧಾರಾವಾಹಿ ನಿರ್ದೇಶಕರೇ ಅವಿಭಕ್ತ ಕುಟುಂಬಗಳನ್ನು ವಿಭಕ್ತ ಕುಟುಂಬಗಳನ್ನಾಗಿ ಮಾಡುವಂತೆ ಕಥೆಗಳನ್ನು ಬದಲಿಸಿ ನಿಮಗೆ ಪುಣ್ಯ ಬರುತ್ತದೆ.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಕಣ್ಣಿಗೆ ಹಬ್ಬ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಪ್ರಾರಂಭದಿಂದಲೂ ಚೆನ್ನಾಗಿ ಮೂಡಿಬರುತ್ತಿದೆ. ನಮ್ಮ ಮನೆಯವರೆಲ್ಲ ಒಟ್ಟಿಗೆ ಕುಳಿತು ನೋಡುತ್ತೇವೆ. ಹಾಗಾಗಿ ಈ ಧಾರಾವಾಹಿಯನ್ನು ನಾವು ಕಾದು ನೋಡುತ್ತೇವೆ. ಕಥೆಯಲ್ಲಿ ಬಳಸಿರುವ ಗ್ರಾಮೀಣ ಕನ್ನಡದ ಸೊಗಡು ಕೇಳುವುದಕ್ಕೆ ಆನಂದ ಅನಿಸುತ್ತದೆ. ನಟಿ ಉಮಾಶ್ರೀ ಸಂಭಾಷಣೆ ಮತ್ತು ಅಭಿನಯ ಸೊಗಸಾಗಿದೆ. ಬಡ್ಡಿ ಬಂಗಾರಮ್ಮನ ಪಾತ್ರ ಕೂಡ ಅದಕ್ಕೆ ಸರಿಸಮನಾಗಿದೆ. ಉಡುಪು–ಆಭರಣ ನೋಡಲು ಕಣ್ಣಿಗೆ ಹಬ್ಬ ಎನಿಸುತ್ತದೆ.

—ಸೀತಾ ಕೇಶವ, ಸಿಡ್ನಿ

## ಸುದ್ದಿ ವಾಹಿನಿಗಳಿಗೆ ವಿನಂತಿ

ಟೀವಿ ಸುದ್ದಿವಾಹಿನಿಗಳ 24/7 ನಿರಂತರ ಸುದ್ದಿಗಳನ್ನು ನೋಡಿ ನೋಡಿ ಈ ಪತ್ರ ಬರೆಯುತ್ತಿರುವೆ. ವರ್ತಮಾನದ ಘಟನೆಗಳ ಬಗ್ಗೆ ಸುದ್ದಿ ವಾಹಿನಿಗಳು ಕಾಳಜಿ ವಹಿಸುತ್ತಿರುವ ಬಗ್ಗೆ ಎರಡು ಮಾತಿಲ್ಲ. ಆದರೆ, ಎರಡು ವರ್ಷಗಳಿಂದ ಕೊರೊನಾಕ್ಕೆ ಸಂಬಂಧಿಸಿದರೆ 'ನಾವೇ ಮೊದಲು' ಎಂದು ಹೇಳುತ್ತಾ ಬಂದಿದ್ದೀರಿ. ಸಂಭಾವ್ಯ 4ನೇ ಅಲೆಯ ಬಗ್ಗೆ ಉತ್ಪ್ರೇಕ್ಷೆ ಮತ್ತು ಭಯಾನಕ ಮಾಹಿತಿಗಳನ್ನು ಕಲ್ಪಿಸಿಕೊಂಡು ವಿಶೇಷ ಕಾರ್ಯಕ್ರಮ ರೂಪಿಸಬೇಡಿ. ಗ್ರಾಫಿಕ್ಸ್ ಮತ್ತು ಗಟ್ಟಿ ದನಿಯಲ್ಲಿ ವೀಕ್ಷಕರನ್ನು ಆತಂಕಿತರನ್ನಾಗಿ ಮಾಡದೆ, ವಾಸ್ತವದ ಸತ್ಯವನ್ನು ಮಾತ್ರ ಬಿತ್ತರಿಸಬೇಕು ಎನ್ನುವುದು ಕಳಕಳಿಯ ವಿನಂತಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು